# ಹೊಸತು

## ಎಂಟಿಆರ್ ಪೋಹ

ಸಿದ್ಧ ಆಹಾರ ತಯಾರಕ ಸಂಸ್ಥೆ ಎಂಟಿಆರ್, ಇದೀಗ ಹೊಸ ರುಚಿಯ ಪೋಹ ಮಿಕ್ಸ್ ಮಾರುಕಟ್ಟೆಗೆ ತಂದಿದೆ. ನಟ್ಸ್ ಮತ್ತು ಒಣ ಹಣ್ಣುಗಳ ಮಿಶ್ರಣದ ಪೋಹ, ಕೇವಲ 3 ನಿಮಿಷಗಳಲ್ಲಿ ತಯಾರಾಗುತ್ತದೆ. ಪೋಹ ಮಿಕ್ಸ್ ರೆಗ್ಯುಲರ್ ಮತ್ತು ಕಟ್ಟಾ ಮೀಠಾ ಎಂಬ ಎರಡು ರುಚಿಗಳಲ್ಲಿ ಲಭ್ಯ. ಬೆಳಗಿನ ಉಪಾಹಾರಕ್ಕೆ ಇದು ಸೂಕ್ತ ಆಯ್ಕೆ ಎಂದು ಎಂಟಿಆರ್ ಹೇಳಿದೆ.




ಬೆಲೆ: 60 ಗ್ರಾಮ್ ಪ್ಯಾಕ್‌ಗೆ 15 ರೂಪಾಯಿ.

ಮಾಹಿತಿಗೆ: 9980855587

## ಫೇರ್ ಆ್ಯಂಡ್ ಲವ್ಲಿ ಮೆನ್




ಸೌಂದರ್ಯವರ್ಧಕ ಉತ್ಪನ್ನಗಳ ತಯಾರಕ ಫೇರ್ ಆ್ಯಂಡ್ ಲವ್ಲಿ ಪುರುಷರಿಗಾಗಿ ಫೇರ್ ಆ್ಯಂಡ್ ಲವ್ಲಿ ಮೆನ್ ಮ್ಯಾಕ್ಸ್ ಫೈರ್‌ನೆಸ್ಸ್ ಕ್ರೀಮ್ ಮಾರುಕಟ್ಟೆಗೆ ಪರಿಚಯಿಸಿದೆ. ಸೌಂದರ್ಯ ಪ್ರಜ್ಞೆ ಇರುವ ಯುವಕರಿಗೆ ಇದು ಸೂಕ್ತ ಆಯ್ಕೆಯಾಗಿದ್ದು, ಮುಖದ ಚರ್ಮದ ಆರೈಕೆಗೆ ಉತ್ತಮ ಕ್ರೀಮ್ ಎಂದು ಕಂಪೆನಿ ಹೇಳಿದೆ. ದಿನವಿಡೀ ತಾಜಾತನ ಕಾಪಾಡಿ, ಮುಖವನ್ನು ಧೂಳು ಮತ್ತು ಸೂರ್ಯನ ಕಿರಣಗಳಿಂದ ಇದು ರಕ್ಷಿಸುತ್ತದೆ.

ಬೆಲೆ: 50 ಗ್ರಾಂ ಪ್ಯಾಕ್‌ಗೆ 70 ರೂಪಾಯಿ.

## ಲ್ಯಾಕ್ಮೆ ಫೇಶಿಯಲ್ ಫೋಮ್



ತ್ವಚೆಯ ಬಗ್ಗೆ ಕಾಳಜಿ ವಹಿಸುವವರಿಗಾಗಿ ಸೌಂದರ್ಯ ಸಾಧನ ತಯಾರಕ ಲ್ಯಾಕ್ಮೆ, ಫೇಶಿಯಲ್ ಫೋಮ್ ಪರಿಚಯಿಸಿದೆ. ಈ ಫೋಮ್ ಬಳಸಿದರೆ ತ್ವಚೆ ಸದಾಕಾಲ ತೇವದಿಂದ ಕೂಡಿದ್ದು, ಚಳಿಗಾಲದ ಒಣಚರ್ಮದ ಸಮಸ್ಯೆಯಿಂದ ತ್ವಚೆಯನ್ನು ರಕ್ಷಿಸುತ್ತದೆ. ಇದರಿಂದ ತ್ವಚೆಯ ತಾಜಾತನ ಹಾಗೆಯೇ ಉಳಿಯುತ್ತದೆ ಎಂದು ಕಂಪೆನಿ ಹೇಳಿದೆ. ಬೆಲೆ: 450 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 09820119070

## ಪಿರಾಮಲ್ ಜಂಗಲ್ ಮ್ಯಾಜಿಕ್

ಪಿರಾಮಲ್ ಹೆಲ್ತ್ ಕೇರ್ ಮಕ್ಕಳಿಗಾಗಿಯೇ ವಿಶೇಷ ಸುಗಂಧ ದ್ರವ್ಯ ಹೊರತಂದಿದೆ. ಜಂಗಲ್ ಮ್ಯಾಜಿಕ್ ಹೆಸರಿನ ಈ ಸುಗಂಧ ದ್ರವ್ಯ ಹಣ್ಣಿನ ಸುಗಂಧವನ್ನು ಹೊಂದಿದ್ದು, ಹಣ್ಣುಗಳ ತೈಲ ಅಂಶವನ್ನು ಬಳಸಿ ನೈಸರ್ಗಿಕವಾಗಿ ತಯಾರಿಸಲಾಗಿದೆ. ಮಕ್ಕಳಿಗೆ ಇಷ್ಟವಾಗುವ ವಿನ್ಯಾಸದ ಬಾಟಲಿಯಲ್ಲಿ ಇದು ಲಭ್ಯ. 5–11 ವರ್ಷದೊಳಗಿನ ಮಕ್ಕಳಿಗೆ ಇದು ಸೂಕ್ತವಾಗಿದ್ದು, ಸುರಕ್ಷಿತವಾದ ಆಯ್ಕೆ ಎಂದು ಪಿರಾಮಲ್ ಹೇಳಿದೆ. ಇದನ್ನು ಬಳಸಿದರೆ ಮಕ್ಕಳಲ್ಲಿ ತಾಜಾ ಹಾಗೂ ಚುರುಕುತನ ಉಂಟಾಗುತ್ತದೆ ಎಂದು ಕಂಪೆನಿ ಹೇಳಿಕೆ. ಬೆಲೆ 60 ಎಂಎಲ್ ಬಾಟಲಿಗೆ 299 ರೂಪಾಯಿ.




ಮಾಹಿತಿಗೆ: 07829469050

## ಡಿಓವೈ ಸೋಪ್

ವಿವಿಎಫ್ ಮಕ್ಕಳಿಗಾಗಿಯೇ ವಿಶೇಷ ಸೋಪ್ ಹೊರತಂದಿದೆ. ನೈಸರ್ಗಿಕ ವಿಧಾನದಲ್ಲಿ ಹಾಲಿನ ಕ್ರೀಮ್ ಬಳಸಿ ಈ ಸೋಪ್ ತಯಾರಿಸಿದ್ದು, ಆಕರ್ಷಕ ವಿನ್ಯಾಸ ಹೊಂದಿದೆ. ವಿಶಿಷ್ಟ ಬಣ್ಣಗಳಿಂದ ಕೂಡಿರುವ ಈ ಸೋಪ್, ಮಕ್ಕಳ ತ್ವಚೆಯನ್ನು ತಾಜಾ ಹಾಗೂ ಮೃದುವಾಗಿರಿಸುತ್ತದೆ. 3–10 ವರ್ಷದೊಳಗಿನ ಮಕ್ಕಳಿಗೆ ಈ ಸೋಪ್ ಸೂಕ್ತ ಆಯ್ಕೆ.




ಬೆಲೆ: 35 ರೂಪಾಯಿ

ವಿವರಗಳಿಗೆ: www.doyworld.com

## ಫಾಸ್ಟ್ರಾಕ್ ಫ್ಯಾಷನ್ ವಾಚ್

ನವೀನ ಫ್ಯಾಷನ್ ಆಯ್ಕೆ ಬಯಸುವವರಿಗಾಗಿ, ಯುವಕರ ನೆಚ್ಚಿನ ಫಾಸ್ಟ್‌ಟ್ರ್ಯಾಕ್ ಟ್ರೆಂಡಿ ಫ್ಯಾಷನ್ ವಾಚ್ ಬಿಡುಗಡೆಗೊಳಿಸಿದೆ. ವಾಟರ್ ರೆಸಿಸ್ಟಂಟ್ ಆಗಿರುವ ಈ ವಾಚ್, ಲೆದರ್ ಬೆಲ್ಟ್ ಹೊಂದಿದೆ. ಇದರಿಂದ ಕೈಗೆ ಮೃದುವಾದ ಅನುಭವವಾಗುತ್ತದೆ. 20 ಎಂ ಡಯಲ್‌ನ ಈ ವಾಚ್‌ಗೆ ಆಕರ್ಷಕ ಸ್ಪೋರ್ಟಿ ಲುಕ್ ಇದೆ.



ಬೆಲೆ 1795 ರೂಪಾಯಿ.

ಮಾಹಿತಿಗೆ : 7259255677